**6ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ,**
**ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.**

**ಎಸ್.ಸಿ.ನಂ.296/2018**

(ಪ್ರಾ.ಸಾ.17 / ಚಾ.ಸಾ.27)

ತಾಃ 04-10-2021 ರಂದು ಸಾಕ್ಷಿಗೆ ಪ್ರಮಾಣ ವಚನ ಮಾಡಿಸಲಾಯಿತು.

ಸಾಕ್ಷಿದಾರರ ಹೆಸರು : ನರೇಂದ್ರ

ತಂದೆಯ ಹೆಸರು : ನಾರಾಯಣಪ್ಪ
ವಯಸ್ಸು : 34 ವರ್ಷ
ಉದ್ಯೋಗ : ಸೇಲ್ಸ್ ಬಾಯ್
ವಾಸ ಸ್ಥಳ : ಬಂಟ್ಟಳ್ಳಿ

**ಮುಖ್ಯ ವಿಚಾರಣೆ : ಸರ್ಕಾರಿ ಅಭಿಯೋಜಕರಿಂದಃ**

ನ್ಯಾಯಾಲಯದ ಮುಂದೆ ಇದ್ದ 1, 4 ಮತ್ತು 6ನೇ ಆರೋಪಿತರನ್ನು ನೋಡಿ ಗುರುತಿಸಿರುವುದಿಲ್ಲ. ಅದೇ ರೀತಿ 2ನೇ ಆರೋಪಿ/ಮಧುಕುಮಾರ್, 3ನೇ ಆರೋಪಿ/ಕೇಶವ ಮೂರ್ತಿ, 5ನೇ ಆರೋಪಿ/ನಾರಾಯಣಸ್ವಾಮಿಯನ್ನು ನಾನು ನೋಡಿರುವುದಿಲ್ಲ. ಅವರನ್ನು ನೋಡಿದರೆ ಗುರುತಿಸಲು ಆಗುವುದಿಲ್ಲ. ಸದರಿ ಆರೋಪಿತರು ಈ ದಿನ ನ್ಯಾಯಾಲಯಕ್ಕೆ ಗೈರು ಹಾಜರಾಗಿರುತ್ತಾರೆ. ಆರೋಪಿತರ ಪರ ವಕೀಲರು ಗುರುತಿಸುವಿಕೆ ತಕರಾರು ಇಲ್ಲ ಎಂದು ಹಾಗೂ ಅವರ ಅನುಪಸ್ಥಿತಿಯಲ್ಲಿ ಸಾಕ್ಷಿ ತೆಗೆದುಕೊಳ್ಳಲು ತಕರಾರು ಇಲ್ಲ ಎಂದು ವಿನಾಯಿತಿ ಅರ್ಜಿ ಸಲ್ಲಿಸಿದ್ದು ಅರ್ಜಿಯನ್ನು ಪುರಸ್ಕರಿಸಲಾಗಿರುತ್ತದೆ.

ಸಾಕ್ಷಿಗೆ ನ್ಯಾಯಾಲಯದ ಮುಂದೆ ಇದ್ದ ಒಂದು ದಾಖಲೆಯನ್ನು ತೋರಿಸಲಾಗಿ ಸಾಕ್ಷಿ ದಾಖಲೆಯಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಸದರಿ ದಾಖಲೆಯು ದಿನಾಂಕ 23-11-2017 ರ ಅಮಾನತ್ತು ಪಂಚನಾಮೆಯಾಗಿದ್ದು ಸದರಿ ಅಮಾನತ್ತು ಪಂಚನಾಮೆಯನ್ನು ಈಗಾಗಲೇ ನಿಪಿ-19 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ-19(ಬಿ) ಎಂದು ಗುರುತಿಸಲಾಯಿತು.

2. ಸುಮಾರು ಮೂರು ವರ್ಷಗಳ ಹಿಂದೆ ಪೋಲಿಸರ ಕೋರಿಕೆಯ ಮೇರೆಗೆ ನಂದಗುಡಿ ಪೋಲಿಸ್ ಠಾಣೆಯಲ್ಲಿ ಸಹಿ ಮಾಡಿರುತ್ತೇನೆ. ಪೋಲಿಸರು ಸಹಿ ಹಾಕಲು ಹೇಳಿದ್ದರಿಂದ ಸಹಿ ಮಾಡಿರುತ್ತೇನೆ. ನನ್ನ ಸಮಕ್ಷಮ ಯಾವುದೇ ವಸ್ತುಗಳನ್ನು ಅಮಾನತ್ತುಪಡಿಸಿಕೊಂಡಿರುವುದಿಲ್ಲ. ನಾನು ಸಹಿ ಮಾಡಿದ ಸಮಯದಲ್ಲಿ ಮತ್ತೆ ಯಾರು ಇದ್ದರು ಎಂದು ಗೊತ್ತಿಲ್ಲ.

3. ಸಾಕ್ಷಿಗೆ ನ್ಯಾಯಾಲಯದ ಮುಂದೆ ಇದ್ದ ನಿಪಿ-6 ರಿಂದ 11 ರಲ್ಲಿರುವ ಪೋಟೋಗಳನ್ನು ತೋರಿಸಲಾಗಿ ಅವುಗಳನ್ನು ನೋಡಿ ಗುರುತಿಸಿರುವುದಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಸರ್ಕಾರಿ ಅಭಿಯೋಜಕರು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದಾರೆ. ಅನುಮತಿ ನೀಡಲಾಯಿತು.)

**ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರವರಿಂದಃ-**

ದಿನಾಂಕ 23-11-2017 ರಂದು ಈ ಪ್ರಕರಣದ 1ನೇ ಆರೋಪಿಯಾದ ನಾರಾಯಣ್ಣಪ್ಪನವರ ಊರಾದ ದೇವಶೆಟ್ಟಿಹಳ್ಳಿ ವಾಸದ ಮನೆಯಲ್ಲಿ ಕರೆದುಕೊಂಡು ಹೋಗಿದ್ದರು ಎಂದರೆ ಸರಿಯಲ್ಲ. ಆ ಸಂದರ್ಭದಲ್ಲಿ ಈ ಪ್ರಕರಣದ 1ನೇ ಆರೋಪಿ/ನಾರಾಯಣಪ್ಪನು ತನ್ನ ಮನೆಯ ಬಳಿಗೆ

ಕರೆದುಕೊಂಡು ಹೋಗಿ ಕವಿತಾ ಡಾಬಾದಿಂದ ತುಂಬಿಕೊಂಡು ಹೋದ ವಸ್ತುಗಳನ್ನು ಹಾಜರುಪಡಿಸುತ್ತೇನೆ ಎಂದು ಹೇಳಿ ಮನೆಯಿಂದ ಒಂದು ಸ್ಯಾಮಸನ್ ಕಂಪನಿಯ ಎರಡು ಫ್ರಿಡ್ಜ್, ಗೋದ್ರಾ ಕಂಪನಿಯ ಡೂಮ್ ಟಿ.ವಿ., ರಾಕ್‌ವೆಲ್ ಕಂಪನಿಯ ಐ-ಕ್ರೀಮ್ ಫ್ರಿಡ್ಜ್, ಎರಡು ಕಡೆ ಕಬ್ಬಿಣದ ಸ್ಟವ್, ಫ್ಲೇವುಡ್ ಟಿ.ವಿ. ಸ್ಟ್ಯಾಂಡನ್ನು ಹಾಜರುಪಡಿಸಿದಾಗ ಪೋಲಿಸರು ನಿಪಿ-19 ರಂತೆ ಪಂಚನಾಮೆ ಮಾಡಿ ಆ ಸಂಬರ್ಧದಲ್ಲಿ ನಿಪಿ-6 ರಿಂದ 11 ಪೋಟೋಗಳನ್ನು ತೆಗೆದಿರುತ್ತಾರೆ ಎಂದರೆ ಸರಿಯಲ್ಲ. ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿತರ ಪರ ವಕೀಲರಿಂದ ಃ**

ಆರೋಪಿತರ ಪರ ವಕೀಲರು ಯಾವುದೇ ಪಾಟೀ-ಸವಾಲು ಇಲ್ಲ ಎಂದು ಹೇಳುತ್ತಾರೆ.

**ಮರುವಿಚಾರಣೆಃ** ಇಲ್ಲ

{ಮೇಲ್ಕಂಡ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಿದೆ.}

ಓ. ಹೇ. ಸಾ. ಸ. ಸಹಿ ಮಾಡಿದ್ದಾರೆ.

(ಚೆನ್ನಪ್ಪ ಗೌಡ)
6ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.